**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 06.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಈ ಪ್ರಕರಣದಲ್ಲಿ ನಾನು ಅರ್ಜಿದಾರರಿಗೆ ಅಂಗನ್ಯೂನ್ಯತಾ ಪ್ರಮಾಣಪತ್ರವನ್ನು ನೀಡಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಪಿ ಎಂ ವಿ ವಕೀಲರಿಂದಃ**

ನಾನು ಅರ್ಜಿದಾರರಿಗೆ ನಿಪಿ.12ರ ಪ್ರಕಾರ ಅಂಗನ್ಯೂನ್ಯತಾ ಪ್ರಮಾಣಪತ್ರವನ್ನು ನೀಡುವ ಪೂರ್ವದಲ್ಲಿ ಅವರು ನಮ್ಮ ಆಸ್ಪತ್ರೆಗೆ ಎರಡು ಬಾರಿ ಚಿಕಿತ್ಸೆ ಪಡೆದಿರುತ್ತಾರೆ. ನಾನು ಕಿಮ್ಸನ ಸರ್ಕಾರಿ ವೈದ್ಯನಾಗಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಕ್ಲೀನಿಕ್ ಸಹ ನಡೆಸುತ್ತೇನೆ ಎಂದು ನುಡಿಯುತ್ತಾರೆ. ನಾನು ಕಿಮ್ಸನ orthopaedic ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತೇನೆ. ಕಿಮ್ಸನಲ್ಲಿ ನನ್ನ ಕೆಲಸದ ವೇಳೆ ಬೆಳಿಗ್ಗೆ 9.00 ಗಂಟೆಯಿಂದ ಮದ್ಯಾಹ್ನ 1.00 ಗಂಟೆ ಎಂದು ನುಡಿಯುತ್ತಾರೆ. ಕ್ಲಾಸ್ ತೆಗೆದುಕೊಳ್ಳಬೇಕಾದರೆ ಮದ್ಯಾಹ್ನ 3.00 ಗಂಟೆಗೆ ಹೋಗಿ ತೆಗೆದುಕೊಳ್ಳುತ್ತೇನೆ. ನಾನು ಬೆಳಿಗ್ಗೆ ಸಮಯದಲ್ಲಿ ಯಾವಾಗಲೂ ಕ್ಲಾಸಸ್ ತೆಗೆದುಕೊಳ್ಳುವುದಿಲ್ಲ ಹಾಗೂ ನಾನು ಕರ್ತವ್ಯದಲ್ಲಿಯೇ ತೊಡಗಿರುತ್ತೇನೆ. ನಾನು ನನ್ನ ಕ್ಲೀನಿಕ್‌ನಲ್ಲಿ ಸಂಜೆ 5.00 ರಿಂದ 8.00 ಗಂಟೆಯವರೆಗೆ ಕೆಲಸ ಮಾಡುತ್ತೇನೆ ಹಾಗೂ

ಕ್ಲಾಸಸ್ ಇಲ್ಲವಾದರೆ ಮದ್ಯಾಹ್ನ ಸಹ ಕೆಲಸ ಮಾಡುತ್ತೇನೆ. ಒಬ್ಬ ಸರ್ಕಾರಿ ನೌಕರರಾಗಿ ನಿಮಗೆ ಖಾಸಗಿ ಕ್ಲೀನಿಕ್ ನಡೆಸಲು ಅನುಮತಿ ಇರುವುದಿಲ್ಲ ಎಂದರೆ ಸರಿ. ನಾನು ಖಾಸಗಿ ಕ್ಲೀನಿಕ್ ಸೆಂಟರ್ ನ್ನು ಅನಧೀಕೃತವಾಗಿ ನಡೆಸುತ್ತೇನೆ ಎಂದರೆ ಸರಿ. ನಾನು ನಡೆಸುತ್ತೀರುವ ವೀರಭದ್ರೇಶ್ವರ ಅರ್ಥೋಕೇರ್ ಆ್ಯಂಡ್ ರೀಹ್ಯಾಬಿಲಿಟೇಶನ್ ಸೆಂಟರ್ ನೊಂದಣಿಯಾಗಿರುತ್ತದೆ. ನಾನು ಸರ್ಕಾರಿ ನೌಕರನಾಗಿದ್ದರೂ ಸಹ ಸದರಿ ಕ್ಲಿನಿಕ್ ನೊಂದಣಿ ಮಾಡಿಕೊಳ್ಳಲು ನನಗೆ ಕಾನೂನಿನಲ್ಲಿ ಅವಕಾಶವಿದೆ. ನಾನು ಸರ್ಕಾರಿ ನೌಕರನಾದ ಕಾರಣ ನನಗೆ ಯಾವುದೇ ಖಾಸಗಿ ಕ್ಲಿನಿಕ್ ನಡೆಸಲು ಬರುವುದಿಲ್ಲ ಆದರೂ ಸಹ ನನ್ನ ಪ್ರತಿರಕ್ಷೆಗೋಸ್ಕರ ಕ್ಲಿನಿಕ್ ನಡೆಸಲು ನನಗೆ ಅವಕಾಶವಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. 2021 ರಲ್ಲಿ ನಾನು ಅರ್ಜಿದಾರರಿಗೆ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಿರುತ್ತೇನೆ ನಿಖರವಾದ ದಿನಾಂಕ ನನಗೆ ನೆನಪಿಲ್ಲ. 2021 ರ ಪೂರ್ವದಲ್ಲಿ ಅವರು ನನ್ನ ಹತ್ತಿರ ಚಿಕಿತ್ಸೆ ಪಡೆಯಲು ಬಂದಿಲ್ಲ ಎಂದರೆ ನಿಜ. ನಿಪಿ.12 ನ್ನು ನಾನು ನಮ್ಮ ಖಾಸಗಿ ಕ್ಲಿನಿಕ್ ಪರವಾಗಿ ನೀಡಿರುತ್ತೇನೆ. ಅಂಗನ್ಯೂನ್ಯತಾ ಪ್ರಮಾಣಪತ್ರವನ್ನು ನೀಡುವ ದಿನ ಅರ್ಜಿದಾರರು ಮದ್ಯಾಹ್ನ 1.00 ಅಥವಾ 2.00 ಗಂಟೆಗೆ ನನ್ನ ಹತ್ತಿರ ಚಿಕಿತ್ಸೆಗೆ ಬಂದಿರುವುದು ನನಗೆ ನೆನಪಿಲ್ಲ. ನಾನು ಕಿಮ್ಸನಲ್ಲಿ ನನ್ನ ಕರ್ತವ್ಯ ಮುಗಿಸಿಕೊಂಡು ನನ್ನ ಖಾಸಗಿ ಕ್ಲಿನಿಕ್ ಗೆ ಹೋಗಲು ಒಂದು ಗಂಟೆಯಾದರೂ ಬೇಕಾಗುತ್ತದೆ ಎಂದರೆ ಸಾಕ್ಷಿ ಇಲ್ಲ 5 ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ನೀವು ಅರ್ಜಿದಾರರನ್ನು ತಪಾಸಣೆ ಮಾಡಿ ಅವರ ಗಾಯದ ಇತಿಹಾಸ ತಿಳಿದುಕೊಂಡು ದಾಖಲೆಗಳನ್ನು ನೋಡಿ ಅಂಗನ್ಯೂನ್ಯತೆ ಅಸೆಸ್ ಮಾಡಬೇಕಾದರೆ 3 ಗಂಟೆ

ಸಮಯ ಬೇಕಾಗುತ್ತದೆ ಎಂದರೆ ಸಾಕ್ಷಿ ಇಲ್ಲ ಒಂದು ಗಂಟೆ ಸಾಕು ಎಂದು ನುಡಿಯುತ್ತಾರೆ.



ನಾನು ಅರ್ಜಿದಾರರಿಗೆ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡುವ ಪೂರ್ವದಲ್ಲಿ ಅವರ ಕೇಸ್ ಹಿಸ್ಟರಿ ನೋಡಿರುತ್ತೇನೆ. ಸದರಿ ದಾಖಲೆಗಳನ್ನು ಅಂಗನ್ಯೂನ್ಯತಾ ಪ್ರಮಾಣಪತ್ರದ ಜೊತೆ ಲಗತ್ತಿಸಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಸಹ ಹಾಜರಪಡಿಸಿರುತ್ತದೆ. ಸಾಕ್ಷಿ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ತಾನು ಕೇಸ್ ಹಿಸ್ಟರಿ ನೋಡಿದ ಬಗ್ಗೆ ದಾಖಲೆಗಳನ್ನು ನಿಪಿ.12 ರ ಜೊತೆ ಲಗತ್ತಿಸಿಲ್ಲ ಎಂದು ನುಡಿಯುತ್ತಾರೆ. ನಾನು ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡುವ ಪೂರ್ವದಲ್ಲಿ ಕೇಸ್ ಹಿಸ್ಟರಿ ನೋಡದೇ ಕೇವಲ ಹೆಸರಿಗೆ ಮಾತ್ರ ಶೇಕಡಾವಾರು ನಮೂದಿಸಿ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಎಡಗಾಲಿಗೆ ಶೇ.30 ರಿಂದ 34 ರಷ್ಟು ಅಂಗನ್ಯೂನ್ಯತೆ ಉಂಟಾಗಿರುತ್ತದೆ. ಯಾವ ಆಧಾರದ ಮೇಲೆ ನೀವು ಅಂಗನ್ಯೂನ್ಯತೆ ನಿರ್ಧರಿಸಿರುತ್ತೀರಿ ಎಂದರೆ ಸಾಕ್ಷಿ ಅವರ ಬಲಗಾಲಿಗೆ ಹೊಲಿಕೆ ಮಾಡಿ ನೋಡಿದಾಗ 1.5 ಸೆಂಟಿ ಮೀಟರ್ ಎಡಗಾಲಿನಲ್ಲಿ ಶಾರ್ಟನಿಂಗ್ ಇತ್ತು ಹಾಗೂ ಇಸಿಎ ಲೆಗಾಮೆಂಟ್‌ನಲ್ಲಿ ಗಾಯ ಇನ್ನೂ ಇತ್ತು ಎಂದು ನುಡಿಯುತ್ತಾರೆ. ನಾನು ಹೇಳಿರುವ ಹಾಗೆ ನಿಪಿ.12 ರಲ್ಲಿ 1 ಸೆಂಟಿ ಮೀಟರ್ ಶಾರ್ಟನಿಂಗ್ ಎಂದು ಹೇಳಿದ್ದು ಈಗ ನಾನು 1.5 ಸೆಂಟಿ ಮೀಟರ್ ಶಾರ್ಟನಿಂಗ್ ಎಂದು ಹೇಳಿದ್ದು ನಾನು ನೀಡಿರುವ ನಿಪಿ.12 ದಾಖಲೆ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಕಿಮ್ಸನಲ್ಲಿ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಲು ಒಂದು ಸಮಿತಿ ಇದೆ ಎಂದರೆ ಸರಿ. ನಾನು ಸದರಿ ಸಮಿತಿಯ ಸದಸ್ಯನಾಗಿರುವುದಿಲ್ಲ ಎಂದರೆ ಸರಿ. ಸದರಿ ಸಮಿತಿಯವರಿಗೆ ಮಾತ್ರ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಲು ಅಧಿಕಾರ ಇದೆ ಹಾಗೂ ನನಗೆ ಸದರಿ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಮಗೂ ಸಹ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಲು ಅಧಿಕಾರ ಇದೆ

ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಅಂತಹ ಯಾವುದೇ ದಾಖಲೆ



ಇರುವುದಿಲ್ಲ ಆದರೆ ನಾನು ಡಿಗ್ರಿ ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಅಂಗನ್ಯೂನ್ಯತೆ ಮಾಪನ ಮಾಡಲು ಬರುವುದಿಲ್ಲ ಆದರೂ ಸಹ ನಾನು ಖೊಟ್ಟಿ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಹತ್ತಿರ ಬಂದಿಲ್ಲ ಹಾಗೂ ಯಾವುದೇ ರೀತಿಯ ಚಿಕಿತ್ಸೆ ಪಡೆದಿಲ್ಲ ಆದರೂ ಸಹ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ವೈದ್ಯನಾದ ಕಾರಣ ನನಗೆ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡುವ ಅಧಿಕಾರ ಇರದೇ ಇದ್ದರೂ ಸಹ ಕಾನೂನು ಬಾಹೀರವಾಗಿ ಅದನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ಹೇಳುವ ಹಾಗೆ ಶೇ.30 ರಿಂದ 34 ರಷ್ಟು ಅಂಗನ್ಯೂನತೆ ಉಂಟಾಗಿಲ್ಲ ಆದರೂ ಸಹ ಸುಳ್ಳು ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.13 ಎಕ್ಸರೇ ಅರ್ಜಿದಾರರಿಗೆ ಸಂಬಂಧಪಟ್ಟಿದ್ದು ಇರುವುದಿಲ್ಲ ಆದರೂ ಸಹ ಅವುಗಳನ್ನು ತೆಗೆದ ಹಾಗೆ ಮಾಡಿ ಅವರಿಗೆ ಅನುಕೂಲವಾಗಲಿ ಎಂದು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

3. ಅಪಘಾತವಾದ ತಕ್ಷಣವೇ ನಾನು ಅರ್ಜಿದಾರರನ್ನು ಚಿಕಿತ್ಸೆಗೆ ಒಳಪಡಿಸಿಲ್ಲ ಎಂದರೆ ಸರಿ. 2021 ರಲ್ಲಿ ಅರ್ಜಿದಾರರಿಗೆ ನಾನು ಮೊದಲನೆ ಬಾರಿಗೆ ಚಿಕಿತ್ಸೆ ನೀಡಿರುತ್ತೇನೆ ಆದರೆ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ಅರ್ಜಿದಾರರು ಟಿಎಸ್ಎಸ್ ಆಸ್ಪತ್ರೆ ಶಿರಸಿಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿ. ನಾನು ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ಕೇಸ್ ಹಿಸ್ಟರಿ ಪರಿಶೀಲನೆ ಮಾಡಿದ ಬಗ್ಗೆ ಯಾವುದೇ ದಾಖಲೆ

ಹಾಜರಪಡಿಸಿಲ್ಲ ಹಾಗೂ ಅಂಗನ್ಯೂನ್ಯತಾ ಪ್ರಮಾಣಪತ್ರ ಮಾತ್ರ ಹಾಜರಪಡಿಸಿರುತ್ತೇನೆ



ಎಂದರೆ ಸರಿ. ಅರ್ಜಿದಾರರು ಟ್ರೀಟ್ಮೆಂಟ್ ಹಿಸ್ಟರಿ, ಡಿಸ್ಚಾರ್ಜ ಸರ್ಟಿಫಿಕೇಟ್ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.8 ರಲ್ಲಿ ಅರ್ಜಿದಾರರಿಗೆ ಯಾವ ರೀತಿ ಗಾಯಗಳಾಗಿದ್ದವು ಹಾಗೂ ಯಾವ ಚಿಕಿತ್ಸೆಯನ್ನು ನೀಡಿದ್ದರು ಎಂದು ವಿಸ್ತಾರವಾಗಿ ಬರೆದಿಲ್ಲ ಎಂದರೆ ಸಾಕ್ಷಿ fracture of sharp Tibia left ಎಂದು ಬರೆದಿದೆ ಎಂದು ನುಡಿಯುತ್ತಾರೆ. ನಿಪಿ.8 ರ ಪ್ರಕಾರ ದಿಃ07/04/2021 ರಂದು ಅರ್ಜಿದಾರರರು ಅಸ್ಪತ್ರೆಯಿಂದ ಡಿಸ್ಚಾರ್ಜ ಆಗಿದ್ದು ಸದರಿ ಅವಧಿಯಿಂದ ನಿಪಿ.12 ದಾಖಲೆ ನೀಡುವ ಅವಧಿಯ ಮಧ್ಯದಲ್ಲಿ ಅವರು ನನ್ನ ಹತ್ತಿರ ಚಿಕಿತ್ಸೆ ಪಡೆದಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ನಿಜ. ಅರ್ಜಿದಾರರು ನಿಮ್ಮ ಹತ್ತಿರ ಅಂಗನ್ಯೂನ್ಯತಾ ಪ್ರಮಾಣಪತ್ರ ಮಾತ್ರ ಪಡೆಯಲು ಬಂದಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಅವರ ಗಾಯ ಇನ್ನೂ ಗುಣಮುಖವಾಗಿರಲಿಲ್ಲ ಎಂದು ನುಡಿಯುತ್ತಾರೆ. Alimbico guidelines ಆಧಾರದ ಮೇಲೆ ನಾನು ಅಂಗನ್ಯೂನ್ಯತೆ ಅಳತೆ ಮಾಡಿರುತ್ತೇನೆ. ಅಂಗನ್ಯೂನ್ಯತಾ ಅಳತೆ ಮಾಡುವ ಪೂರ್ವದಲ್ಲಿ ಕೆಲವೊಂದು ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ ಎಂದರೆ ಸರಿ. ಸದರಿ ಪರೀಕ್ಷಾ ವರದಿಗಳನ್ನು ನಾನು ನಿಪಿ.12 ರ ಜೊತೆ ಲಗತ್ತಿಸಿಲ್ಲ ಎಂದರೆ ಸರಿ. ನಾನು ನಿಪಿ.12 ಪ್ರಮಾಣಪತ್ರ ನೀಡುವ ಪೂರ್ವದಲ್ಲಿ ಅವರಿಗೆ ಯಾವ ತೊಂದರೆಗಳು ಇದ್ದವು ಹಾಗೂ ಸದರಿ ತೊಂದರೆಗಳನ್ನು ನಾನು ಪರೀಕ್ಷೆ ಮಾಡುವ ಸಮಯದಲ್ಲಿ ಅವರಿಗೆ ಇದ್ದ ತೊಂದರೆಗಳಿಗೆ ಹೊಲಿಸಿಲ್ಲ ಎಂದರೆ ಸಾಕ್ಷಿ ಹೋಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ಬಗ್ಗೆ ನೀವು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ನಿಜ ಎಂದು ನುಡಿಯುತ್ತಾರೆ.

4. ಒಂದು ಸೆಂಟಿ ಮೀಟರ್ ನಷ್ಟು ಶಾರ್ಟನಿಂಗ್ ನೈಸರ್ಗಿಕ ಕಾರಣಗಳಿಂದ ಆಗುವ



ಸಾಧ್ಯತೆ ಇದೆ ಎಂದರೆ ಸರಿಯಲ್ಲ ಹಾಗೂ ಸದರಿ ಶೇಕಡಾವಾರನ್ನು ಅಳತೆ ಮಾಡುವಲ್ಲಿ ತಪ್ಪಾದರೆ ಸಹ ಆ ರೀತಿ ಆಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರ ಗಳಿಕೆ ಸಾಮರ್ಥ್ಯ ಹಾಗೂ ಅವರ ಅಂಗನ್ಯೂನ್ಯತೆಗೆ ನಾನು ಹೋಲಿಕೆ ಮಾಡಿಯೇ ನಾನು ನಿಪಿ.12 ಪ್ರಮಾಣಪತ್ರ ನೀಡಿರುತ್ತೇನೆ. ನಾನು ಈ ರೀತಿ ಗಳಿಕೆ ಸಾಮರ್ಥ್ಯ ಗಮನದಲ್ಲಿಟ್ಟುಕೊಂಡು ನಿಪಿ.12 ಪ್ರಮಾಣಪತ್ರ ನೀಡಿದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ನಾನು ನೀಡಿರುವ ಶೇ.30 ರಿಂದ 34 ರಷ್ಟು ಅಂಗನ್ಯೂನ್ಯತೆ ಇದು guidelines issued by social and family welfare deportment ಪ್ರಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ.12 ರಲ್ಲಿ ನಾನು ಪ್ರತ್ಯೇಕ ಅಂಗದ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಿಲ್ಲ ಹಾಗೂ whole body ಎಂದು ಬರೆದಿರುತ್ತೀರಿ ಎಂದರೆ ಸಾಕ್ಷಿ ನಾನು ನೀಡಿದ ಅಂಗನ್ಯೂನ್ಯತಾ ಪ್ರಮಾಣಪತ್ರ left lower limb ಗೋಸ್ಕರ ಇದೆ ಎಂದು ನುಡಿಯುತ್ತಾರೆ. ನಾನು ಪ್ರತ್ಯೇಕ ಅಂಗದ ಅಂಗನ್ಯೂನ್ಯತೆ ಮಾಪನ ಮಾಡಿಲ್ಲ ಹಾಗೂ ಗಳಿಕೆ ಸಾಮರ್ಥ್ಯದ ನ್ಯೂನ್ಯತೆ ಸಹ ಮಾಪನ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.12 ರಲ್ಲಿ ನಾನು complete union of fracture tibia and fibula with inter medullary nail insitu tibia proximal and distal locking present ಎಂದು ಬರೆದಿರುವ ಕಾರಣ ಅರ್ಜಿದಾರರಿಗೆ ಆದ ಗಾಯಗಳು ಸಂಪೂರ್ಣವಾಗಿ ಗುಣಮುಖವಾಗಿದೆ ಎಂದು ಅರ್ಥ ಎಂದರೆ ಸಾಕ್ಷಿ ಅದು ತಪ್ಪು ಎಂದು ನುಡಿಯುತ್ತಾರೆ.

ನ್ಯಾಯಾಲಯದ ಪ್ರಶ್ನೆಃ ಹಾಗಿದ್ದರೆ ಅರ್ಜಿದಾರರಿಗೆ ಯಾವ ಅಂಗದಲ್ಲಿ ಏನು ಸಮಸ್ಯೆ ಇದೆ?

ಉತ್ತರಃ ಅರ್ಜಿದಾರರು ನಡೆಯಬೇಕಾದರೆ ಕುಂಟುತ್ತಾರೆ ಹಾಗೂ ಕಾಲಿನ ಮೇಲೆ ಭಾರ

ಹಾಕಿ ನಿಲ್ಲಲು ಬರುವುದಿಲ್ಲ ಎಂದು ನುಡಿಯುತ್ತಾರೆ.



5. ನಿಪಿ.12 ಅಂಗನ್ಯೂನತಾ ಪ್ರಮಾಣಪತ್ರ ನೀಡುವ ದಿನದಂದು ನಾನು ಕಿಮ್ಸನಲ್ಲಿ ಕರ್ತವ್ಯದಲ್ಲಿ ಹಾಜರಿದ್ದೇನು. 10.00 ರಿಂದ 12.00 ಗಂಟೆಯ ಅವಧಿಯ ಮಧ್ಯದಲ್ಲಿ ಅರ್ಜಿದಾರರು ನನ್ನ ಹತ್ತಿರ ಅಂಗನ್ಯೂನ್ಯತೆ ಮಾಪನ ಮಾಡಿಸಿಕೊಳ್ಳಲು ಬಂದಿದ್ದರು ಹಾಗೂ ನಾನು ಸದರಿ ಅವಧಿಯಲ್ಲಿ ಅವರಿಗೆ ನಿಪಿ.12 ಪ್ರಮಾಣಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಹತ್ತಿರ ಬಂದೇ ಇರಲಿಲ್ಲ ಹಾಗೂ ಅವರಿಗೆ ಹೆಚ್ಚಿನ ಪ್ರಮಾಣದ ಅಂಗನ್ಯೂನ್ಯತೆ ಶೇಕಡಾವಾರು ನೀಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮಲ್ಲಿ ಗಾಯಾಳು ಚಿಕಿತ್ಸೆಗೆ ಬಂದಲ್ಲಿ ಓಪಿಡಿ ಚೀಟಿ ಮಾಡುತ್ತೇವೆ ಎಂದರೆ ಸರಿ. ಅಂತಹ ಯಾವುದೇ ಓಪಿಡಿ ಚೀಟಿಯನ್ನು ನಾನು ಈ ಪ್ರಕಣದಲ್ಲಿ ಹಾಜರಪಡಿಸಿಲ್ಲ ಆದರೂ ಸಹ ಅರ್ಜಿದಾರರಿಗೆ ಚಿಕಿತ್ಸೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**